| PUBLICATION NAME : | Sanjevani |
|---|---|
| DATE : | 01/03/2025 |
| PAGE : | 02 |

# ಶಿಕ್ಷಣ ತಜ್ಞರ ಸಮ್ಮೇಳನ

ಬೆಂಗಳೂರು,ಮಾ.1- ಸಂಶೋಧಕರು,ಶಿಕ್ಷಣತಜ್ಞರು ಹಾಗೂ ಅಭ್ಯಾಸಿಗಳಿಗೆ ಉದ್ಯಮಶೀಲತೆಯ ಅಭಿವೃದ್ಧಿಯ ವಿವಿಧ ಕ್ಷೇತ್ರಗಳ ಕುರಿತಾದ ಅವರ ಸಂಶೋಧನೆಯ ಅಧ್ಯಯನಗಳುಮತ್ತುಫಲಿತಾಂಶಗಳನ್ನು ಹಂಚಿಕೊಳ್ಳಲು ದ್ವೈವಾರ್ಷಿಕ ಸಮ್ಮೇಳನವನ್ನು ನಡೆಯಿತು.

ಅಹಮದಾಬಾದ್ ನ ಆಂತ್ರಪ್ರಿನ್ಯೂರ್‌ಶಿಪ್ ಡೆವಲಪ್‌ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಇಡಿಐಐ) ಆಯೋಜಿಸಿದ್ದ

ಸಮ್ಮೇಳನದಲ್ಲಿ ಉದ್ಯಮಶೀಲತೆಯ ತತ್ವಮತ್ತುರೂಢಿ,ಉದ್ಯಮಶೀಲತೆಯ ಶಿಕ್ಷಣ,ಉದ್ಯಮಶೀಲತೆಯ ವ್ಯವಸ್ಥೆ, ಮನಃಶಾಸ್ತ್ರ ಮತ್ತು ಉದ್ಯಮಶೀಲತೆ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿದೆ.

ಎಂಎಸ್‌ಇಂಇ ಉದ್ಯಮಶೀಲತೆ, ತಂತ್ರಜ್ಞಾನ ಮತ್ತು ಡಿಜಿಟಲ್ ಉದ್ಯಮಶೀಲತೆ, ಸ್ಟಾರ್ಟಪ್ ಮತ್ತು ಆವಿಷ್ಕಾರ, ಹಸಿರು ಮತ್ತು ಸುಸ್ಥಿರ ಉದ್ಯಮಶೀಲತೆ,ಸಾಮಾಜಿಕ ಉದ್ಯಮಶೀಲತೆ,ಸಂಸ್ಕೃತಿ,ಸಂಪ್ರದಾಯ ಮತ್ತುಮೌಲ್ಯಾಧಾರಿತ ಉದ್ಯಮಶೀಲತೆ, ಮಹಿಳಾ ಉದ್ಯಮಶೀಲತೆ,ಗ್ರಾಮೀಣ ಉದ್ಯಮಶೀಲತೆ ಮತ್ತು ಹೊಸತನದ ಉದ್ಯಮಶೀಲತೆ ಮತ್ತು ಹೊಸ ಉದ್ಯಮ ಸೃಷ್ಟಿ ಹಾಗೂ ಕುಟುಂಬ ವ್ಯವಹಾರಗಳ ಕುರಿತಾದ 9 ದೇಶಗಳ ವಿದ್ವಾಂಸದಿಂದ 148 ಸಂಶೋಧನಾ ಪ್ರಬಂಧಗಳು ಮತ್ತು ಅಧ್ಯಯನಗಳನ್ನು ಮಂಡಿಸಲಾಯಿತು.

ಈಸಮ್ಮೇಳನವನ್ನು ಅಹಮದಾಬಾದ್ ನ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಪ್ರೊ ಟಿ.ವಿ. ರಾವ್ ಉದ್ಘಾಟಿಸಿ ಸಮ್ಮೇಳನದ ಫಲಿತಾಂಶಗಳು ಉದ್ಯಮಶೀಲತೆಯ ಮೇಲೆ ಗಮನಾರ್ಹ ಪ್ರಭಾವ ಬೀರಲಿವೆ ಎಂದರು.ಇಡಿಐಐ ಡೈರೆಕ್ಟರ್ ಜನರಲ್ ಡಾ.ಸುನಿಲ್ ಶುಕ್ಲಾ ಪಾಲ್ಗೊಂಡಿದ್ದರು.